ಸಕ್ಕರೆ ಹಾಗೂ ಸೀಮೆಎಣ್ಣೆ ವಿತರಣೆ ಪ್ರಮಾಣ

	ಗ್ರಾಮೀಣ ಪ್ರದೇಶ	ಪಟ್ಟಣ ಪ್ರದೇಶ	ಅಪ ಪ್ರದೇಶ
ಸಕ್ಕರೆ	$1^1/_2$ - 2 ಕೆ.ಜಿ.	3 ಕೆ.ಜಿ.	3 ಕೆ.ಜಿ.
ಸೀಮೆಎಣ್ಣೆ	3 $^1/_2$ ಯಿಂದ 5 ಲೀಟರ್	6 ರಿಂದ 8 ಲೀಟರ್	8 ರಿಂದ 11 ಲೀಟರ್

ಆ) ಇಲ್ಲ.

ಇ) ಹೌದು, ಪಡಿತರ ಪದ್ಧತಿಯನ್ನು ಪ್ರಾರಂಭದಲ್ಲಿ ನಗರ ಪ್ರದೇಶಗಳಲ್ಲಿ ಜಾರಿಗೆ ತಂದಿದ್ದು ಅದನ್ನು ಗ್ರಾಮಾಂತರ ಪ್ರದೇಶಗಳಿಗೆ ತದನಂತರ ವಿಸರ್ಜಿಸಲಾಗಿದೆ. ನಗರ ಪ್ರದೇಶದಲ್ಲಿ ಕೊಡಲಾಗುತ್ತಿದ್ದ ಸಕ್ಕರೆ ಮತ್ತು ಸೀಮೆಎಣ್ಣೆ ಪ್ರಮಾಣವನ್ನು ಕಡಿಮೆ ಮಾಡಿ ಗ್ರಾಮಾಂತರ ಪ್ರದೇಶಗಳಿಗೆ ವರ್ಗಾಂತರಿಸಲಾಯಿತು. ಆದರೂ ಸಹ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ವಿತರಿಸಲಾಗುವ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಈ ಅಂತರವನ್ನು ಕಡಿಮೆ ಮಾಡಲು ಪ್ರಯತ್ನ ಮಾಡಲಾಗುತ್ತಿದೆ.

ವಿಷಯ : ಬೆಂಗಳೂರು ನಗರಪಾಲಿಕೆಯ ಟಾಸ್ಕ್ ಫೋರ್ಸ್‌ನವರು ಕೆಡವಿರುವ ಅನಧಿಕೃತ ಕಟ್ಟಡಗಳು

1477 (2082)-ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಜನವರಿ 1997ರಿಂದ ಜೂನ್ 1997ರವರೆಗೆ ಬೆಂಗಳೂರು ಮಹಾನಗರ ಪಾಲಿಕೆ ಟಾಸ್ಕ್ ಫೋರ್ಸ್ ಅವರು ಎಷ್ಟು ಅನಧಿಕೃತ ನಿರ್ಮಾಣಗಳನ್ನು ಕೆಡವಿ ಹಾಕಿರುತ್ತಾರೆ.

ಆ) ಇದರಲ್ಲಿ, ಭಾರತೀನಗರ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಅನಧಿಕೃತ ನಿರ್ಮಾಣಗಳನ್ನು ಕೆಡವಿ ಹಾಕಲಾಗಿದೆ?

ಇ) ಈ ಅನಧಿಕೃತ ನಿರ್ಮಾಣಗಳಿಗೆ ಕಾರಣಕರ್ತರು ಯಾರು?

ಈ) ಭಾರತೀನಗರ ವಿಧಾನಸಭಾ ಕ್ಷೇತ್ರದಲ್ಲಿನ ಬಡಜನರು ಈ ರೀತಿಯ ಕಟ್ಟಡಗಳ ಕೆಡವಿಕೆಯಿಂದ ಹೊರಹಾಕಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಸರ್ಕಾರವು ಅವರಿಗೆ ಬದಲಿ ನಿವೇಶನ ಅಥವಾ ಮನೆಯನ್ನು ನೀಡುವುದೇ?

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು)

ಅ)	ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿ	252
	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	13
	ನಗರಸಭೆಗಳು	1000
	ಕೊಳಚೆ ನಿರ್ಮೂಲನಾ ಮಂಡಳಿ	430
	ಒಟ್ಟು	**1698**

ಆ) ಯಾವುದೂ ಇಲ್ಲ.

ಇ) ಯಾರು ಅನಧಿಕೃತ ನಿರ್ಮಾಣ ಮಾಡಿರುತ್ತಾರೆಯೋ ಅವರೇ ಜವಾಬ್ದಾರರಾಗಿರುತ್ತಾರೆ.

ಈ) ಭಾರತೀನಗರ ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ಅನಧಿಕೃತ ನಿರ್ಮಾಣಗಳನ್ನು ಕೆಡವಿ ಹಾಕಿಲ್ಲವಾದ್ದರಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ವಿಷಯ : ನಿರ್ಮಲ ಬೆಂಗಳೂರು ಆಂಧೋಲನ

1498 (2080)-ಶ್ರೀ ಎನ್. ರಾಜಣ್ಣ (ಭಾರತಾ ನಗರ) : ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಮಹಾನಗರ ಪಾಲಿಕೆಯು ನಿರ್ಮಲ ಬೆಂಗಳೂರು ಅಂದೋಲನ ಕಾರ್ಯಕ್ರಮವೇನಾದರೂ ಹಮ್ಮಿ ಕೊಂಡಿದೆಯೇ?

ಆ) ಹಾಗಿದ್ದಲ್ಲಿ, ಪ್ರತಿ ಡಿವಿಜನ್‌ಗಳಲ್ಲಿ ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಂಡಿದೆ?

ಇ) ಈ ಕಾರ್ಯಕ್ರಮಕ್ಕೆ ಸ್ವಯಂ ಸೇವಾ ಸಂಸ್ಥೆಗಳು ನಗರಸಭಾ ಸದಸ್ಯರು, ಸ್ಥಳೀಯ ಜನರ ಮತ್ತು ಶಾಸಕರ ಸೇವೆಯನ್ನು ಪಡೆದುಕೊಳ್ಳಲಾಗಿದೆಯೇ?

ಈ) ಈವರೆವಿಗೆ ಈ ಕಾರ್ಯಕ್ರಮಕ್ಕೆ ಖರ್ಚು ಮಾಡಿರುವ ಮೊತ್ತವೆಷ್ಟು?

ಶ್ರೀ ಅನಂತನಾಗ್ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು)

ಅ) ಹೌದು